

# ಹಳದಿ ಕಲ್ಲು ಉದ್ಯಾನ

ಹಳದಿ ಬಣ್ಣದ ಕಲ್ಲುಗಳ ಉದ್ಯಾನವನ್ನು ಎಲ್ಲಿಯಾದರೂ ನೋಡಿದ್ದೀರಾ? ಇಲ್ಲವೆಂದಾದರೆ ಅಮೆರಿಕದ ರಾಷ್ಟ್ರೀಯ ಉದ್ಯಾನಕ್ಕೆ ಭೇಟಿ ಕೊಡಿ. 'ಎಲ್ಲೋ ಸ್ಟೋನ್' ಉದ್ಯಾನ ಎಂದೇ ಹೆಸರಾಗಿರುವ ಇಲ್ಲಿ ಸುಮಾರು 3,500 ಮೈಲುಗಳಷ್ಟು ದೂರದಲ್ಲಿ ಹಳದಿ ಕಲ್ಲುಗಳು ವ್ಯಾಪಿಸಿವೆ. ಲಕ್ಷಾಂತರ ಪ್ರವಾಸಿಗರನ್ನೂ ಈ ಉದ್ಯಾನ ಕೈಬೀಸಿ ಕರೆಯುತ್ತಿದೆ.

ಈ ಎಲ್ಲೋ ಸ್ಟೋನ್ ಸುಪ್ತ ಜ್ವಾಲಾಮುಖಿಯ ಮೇಲಿರುತ್ತದೆ. ಇದು ಭೂಮಿಯ ಇತರ ಯಾವುದೇ ಪ್ರದೇಶಗಳಿಗಿಂತ ಹೆಚ್ಚು ಬಿಸಿನೀರಿನ ಬುಗ್ಗೆಗಳ ನೆಲೆಯಾಗಿದೆ. ಇಲ್ಲಿ ಸುಣ್ಣದ ಕಲ್ಲು ಮೃದು ಬಂಡೆಯಾಗಿ ಪರಿವರ್ತಿತವಾದಂತಿದೆ. ಈ ಪ್ರದೇಶ ಗುಹೆಯಾಕಾರವನ್ನೂ ತಳೆದಿದೆ ಎನ್ನುತ್ತಾರೆ ತಜ್ಞರು.

■ ಎಸ್. ಪ್ರಭಾವತಿ, ಬೆಂಗಳೂರು

